


بسم اللهِ الرّحمٰن الرّحيم

# ಖುರ್‌ಆನಿನ ಮಹತ್ವ ಮತ್ತು ಪ್ರಾಧಾನ್ಯತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–03–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರ್‌ರತ್ ಮಸೀಹ್ ಮೌಊದ್(ಅ) ನಮಗೆ ನೀಡಿರುವ ಪವಿತ್ರ ಖುರ್‌ಆನಿನ ಅರಿವು ಅಥವಾ ತಮ್ಮ ಗ್ರಂಥಗಳು ಮತ್ತು ಉಪದೇಶಗಳಲ್ಲಿ ಆ ಜ್ಞಾನವನ್ನು ಅರಿಯಲು ಮತ್ತು ಅದರ ಪ್ರಕಾರ ನಡೆಯುವ ವಿಧಾನದ ಬಗ್ಗೆ ಅವರು ಹೇಳಿದ್ದನ್ನು ನಾನು ಕಳೆದ ಖುತ್ಬಗಳಲ್ಲಿ ಸ್ವಲ್ಪ ಪ್ರಸ್ತಾಪಿಸಿದ್ದೆ. ಪವಿತ್ರ ಖುರ್‌ಆನ್ ನಮಗೆ ನೀಡುವ ಅರಿವಿನ ಭಂಡಾರವೇ ಸತ್ಯದಲ್ಲಿ ದಾಸನನ್ನು ದೇವನೊಂದಿಗೆ ಸೇರಿಸುತ್ತದೆ. ಅದಲ್ಲದೇ ದೇವನನ್ನು ಗಳಿಸಲು ಬೇರೆ ಮಾರ್ಗವಿಲ್ಲ. ಹಝ್ರ್‌ರತ್ ಮಸೀಹ್ ಮೌಊದ್(ಅ) ತನ್ನ ಒಂದು ಕವಿತೆಯಲ್ಲಿ ಹೇಳುತ್ತಾರೆ:

**ಖುರ್‌ಆನ್ ಖುದಾ ನುಮಾ ಹೇ, ಖುದಾ ಕಾ ಕಲಾಂ ಹೇ,**

**ಬೇ ಇಸ್ ಕೆ ಮಅರಿಫತ್ ಕಾ ಚಮನ್ ನಾತಮಾಮ್ ಹೇ.**

ಎಂದರೆ, ಖುರ್‌ಆನ್ ದೇವನನ್ನು ತೋರಿಸಿ ಕೊಡುವಂಥದ್ದಾಗಿದೆ ಮತ್ತು ದೇವನ ವಚನವಾಗಿದೆ. ಅದಿಲ್ಲದೇ ಜ್ಞಾನದ ತೋಟ ಅಪೂರ್ಣ.

ಇದು ನಾವು ಸದಾ ನಮ್ಮ ಮುಂದಿರಿಸಬೇಕಾದ ಅಂಶವಾಗಿದೆ. ನಾವು ಅಲ್ಲಾಹನ ಸಾಮೀಪ್ಯ ಮತ್ತು ಸಂಪ್ರೀತಿಯನ್ನು ಬಯಸುವವರಾದರೆ, ನಮ್ಮ ಇಹಲೋಕ ಮತ್ತು ಪರಲೋಕವನ್ನು ಸುಂದರವಾಗಿಸಲು ಇಚ್ಛಿಸುವವರಾದರೆ ನಾವು ಈ ಸಂಗತಿಗಳನ್ನು ನೆನಪಿನಲ್ಲಿಡಬೇಕು. ಪವಿತ್ರ ಖುರ್‌ಆನಿನ ಜ್ಞಾನದಿಂದ ಪ್ರಯೋಜನ ಪಡೆಯಲಿಕ್ಕೂ ಅಲ್ಲಾಹನು ಕಳುಹಿಸಿದ ಸನ್ಮಾರ್ಗದರ್ಶಕನ ಆವಶ್ಯಕತೆಯಿದೆ ಎಂಬ ಸಂಗತಿಯನ್ನು ಸಹ ಮುಂದಿರಿಸಬೇಕು. ಈ ಕಾಲದ ಸನ್ಮಾರ್ಗದರ್ಶಕ ಹಝ್ರ್‌ರತ್ ಪೈಗಂಬರ್(ಸ)ರ ಸತ್ಯಸಂಧ ದಾಸರಾದ ಹಝ್ರ್‌ರತ್ ಮಸೀಹ್ ಮೌಊದ್(ಅ) ಆಗಿರುವರು. ಪವಿತ್ರ ಖುರ್‌ಆನಿನ ವಿವಿಧ ಮಗ್ಗಲುಗಳ ಬಗ್ಗೆ ಅವರು ಆಳವಾಗಿ ಬೆಳಕು ಬೀರಿರುವ ಬಗ್ಗೆ ಮತ್ತು ಅದರ ಸೌಂದರ್ಯದ ಕುರಿತು ತಿಳಿಸಿ ಕೊಟ್ಟಿದ್ದನ್ನು ಸಂಬಂಧಿಸಿ ಕಳೆದ ಎರಡು ಖುತ್ಬಗಳಲ್ಲಿ ನಾನು ಸ್ವಲ್ಪವಾಗಿ ಹೇಳಿದ್ದೆ. ಈ ಪರಂಪರೆ ಈಗ ಮುಂದುವರೆಯುತ್ತಿದೆ. ಇದರ ಕುರಿತು ಸಾಕಷ್ಟು ಸಂಗತಿಗಳನ್ನು ಹೇಳಲಿಕ್ಕಿದೆ. ಇಂದು ಕೂಡ ಈ ಪರಂಪರೆಯನ್ನು ಮುಂದುವರೆಸುತ್ತಾ ನಾನು ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಉಪದೇಶಗಳ ಬೆಳಕಿನಲ್ಲಿ ಪವಿತ್ರ ಖುರ್‌ಆನಿನ ವಿಶೇಷತೆ, ಪದವಿ ಮತ್ತು ಪ್ರಾಮುಖ್ಯತೆಯ ಬಗ್ಗೆ ಪ್ರಸ್ತಾಪಿಸುತ್ತೇನೆ.

ಪವಿತ್ರ ಖುರ್‌ಆನ್ ದೇವ ವಚನವಾಗಿದೆ ಎಂಬುದನ್ನು ವಿವರಿಸುತ್ತಾ ಲಾಲ ಭೀಮ್‌ಸೇನ್ ಎಂಬವರಿಗೆ ಬರೆದ ಪತ್ರದಲ್ಲಿ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸ್ವಲ್ಪ ದಿನಗಳ ಹಿಂದೆ ಲೇಖ್‌ರಾಮ್ ಎಂಬ ಹೆಸರಿನ ಆರ್ಯಧರ್ಮಿಯಾದ ಓರ್ವ ಬ್ರಾಹ್ಮಣ ಖಾದಿಯಾನಿಗೆ ಬಂದು ನನ್ನನ್ನು ಭೇಟಿ ಮಾಡಿದ್ದರು. ವೇದವು ದೇವ ವಚನವಾಗಿದೆ ಎಂದು ಅವರು ಹೇಳಿದರು. ಪವಿತ್ರ ಖುರ್‌ಆನ್ ದೇವ ವಚನವೆಂದು ನನಗೆ ಗೊತ್ತಿದೆ. ಏಕೆಂದರೆ, ಅದರಲ್ಲಿ ಬಹುದೇವಾರಾಧನೆಯನ್ನು ಕಲಿಸಲಾಗಿಲ್ಲ ಅಥವಾ ಅದರಲ್ಲಿ ಅಪವಿತ್ರವಾದ ಬೇರೆ ಯಾವುದೇ ಅಧ್ಯಾಪನೆಯಿಲ್ಲ. ಅದನ್ನು ಅನುಸರಿಸುವುದರಿಂದ ಜೀವಂತ ದೇವನ ಮುಖ ಕಂಡು ಬರುತ್ತದೆ ಮತ್ತು ದಿವ್ಯ ದೃಷ್ಟಾಂತಗಳು ಪ್ರಕಟವಾಗುತ್ತವೆ. ಒಟ್ಟಿನಲ್ಲಿ, ದೇವ ವಚನಕ್ಕೆ ಇರುವ ನಿಬಂಧನೆ ಏನೆಂದರೆ, ಅದರಲ್ಲಿ ಬಹುದೇವಾರಾಧನೆಯ ಬೋಧನೆ ಇರಬಾರದು ಮತ್ತು ಅದನ್ನು ಅನುಸರಿಸುವುದರಿಂದ ದೇವನ ಮುಖ ಕಾಣುವಂತಾಗಬೇಕು.

ಅಲ್ಲಾಹನ ಮುಖವನ್ನು ತೋರಿಸಲು ಪವಿತ್ರ ಖುರ್‌ಆನ್ ವಹಿಸಿಕೊಂಡ ಪಾತ್ರವನ್ನು ಸಹಾಬಿಯರ ಜೀವಿತಗಳಿಂದ ತಿಳಿಯಬಹುದಾಗಿದೆ. ಸಹಾಬಿಯರ ಜೀವಿತಗಳಲ್ಲಿ ಪವಿತ್ರ ಖುರ್‌ಆನಿನ ಪಾಠದ ಪ್ರಭಾವವನ್ನು ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಸ್ಲಾಮಿನ ಪ್ರಧಾನ ಸಮಯವಾದ ಹಝ್ರ್‌ರತ್ ಪೈಗಂಬರ್(ಸ)ರ ಕಾಲಘಟ್ಟವನ್ನು ಆಳವಾಗಿ ನೋಡುವುದರಿಂದ ಹಝ್ರ್‌ರತ್ ಪೈಗಂಬರ್(ಸ)ರ ಬೋಧನೆಯು ಸತ್ಯವಿಶ್ವಾಸಿಗಳನ್ನು ಕೀಳು ಪದವಿಯಿಂದ ಉನ್ನತ ಪದವಿಗೆ ಹೇಗೆ ಮುಟ್ಟಿಸಿತ್ತು ಎಂದು ಸಾಬೀತಾಗುತ್ತದೆ. ಅಲ್ಲಾಹನು ಒಬ್ಬ ವ್ಯಕ್ತಿಯ ಮೂಲಕ ಅವರಿಗೆ ನೆರವು ನೀಡಿದನು. ಸಹಾಬಿಯರು ತಮ್ಮ ಕೊರತೆಗಳನ್ನು ಮತ್ತು ಪಾಪಗಳನ್ನು ಅರಿತುಕೊಂಡು ಅದರ ದುರ್ಗಂಧದಿಂದ ದೂರವಾದರು ಎಂದು ಮಾತ್ರವಲ್ಲ, ಬದಲಾಗಿ ಸತ್ಕರ್ಮಗಳ ಕಡೆಗೆ ಹೆಜ್ಜೆ ಹಾಕಿಕೊಂಡರು. ಅಲ್ಲಾಹನನ್ನು ಸಂಪ್ರೀತಗೊಳಿಸಲು ಅವರು ಮನುಷ್ಯನು ಊಹಿಸಲು ಸಾಧ್ಯವಲ್ಲದ ಕಠಿಣ ಪ್ರಯತ್ನಗಳನ್ನು ಮಾಡಿಕೊಂಡರು. ಅವರು ಅಲ್ಲಾಹನ ಮಾರ್ಗದಲ್ಲಿ ತಮ್ಮ ಜೀವಗಳಿಗೆ ಹುಲ್ಲುಕಡ್ಡಿಗಳಷ್ಟು ಕೂಡ ಬೆಲೆ ಕೊಡಲಿಲ್ಲ. ಕೊನೆಗೆ ಅವರನ್ನು ಸ್ವೀಕರಿಸಲಾಯಿತು ಮತ್ತು ಅಲ್ಲಾಹನು ಅವರ ಹೃದಯಗಳನ್ನು ಪಾಪಗಳಿಂದ ಸಂಪೂರ್ಣವಾಗಿ ದೂರವಿರಿಸಿದನು ಮತ್ತು ಸತ್ಕರ್ಮದೊಂದಿಗೆ ಪ್ರೀತಿಯನ್ನು ಹುಟ್ಟಿಸಿದನು. ಒಟ್ಟಿನಲ್ಲಿ ಇದಾಗಿದೆ ಅವರ ಮೇಲೆ ಪವಿತ್ರ ಖುರ್‌ಆನಿನ ಪ್ರಭಾವ. ಅವರು ಭೂಮಿಯಿಂದ ಎದ್ದು ಆಕಾಶದ ಮಿನುಗುವ ನಕ್ಷತ್ರಗಳಾದರು. ಅವರಲ್ಲಿ ಪ್ರತಿಯೊಬ್ಬರು ನಿಮಗೆ ಸನ್ಮಾರ್ಗದರ್ಶಕರು ಎಂದು ಅವರ ಕುರಿತು ಹಝ್ರ್‌ರತ್ ಪೈಗಂಬರ್(ಸ) ಹೇಳಿದರು.

ಹಝ್ರ್‌ರತ್ ಮಸೀಹ್ ಮೌಊದ್(ಅ) ಮತ್ತೂ ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ಅನುಸರಿಸುವುದರಿಂದ ಮನುಷ್ಯನು ಅತ್ಯುನ್ನತನಾದ ಅಲ್ಲಾಹನ ಗುಣಗಳನ್ನು ಪ್ರಕಟಿಸುತ್ತಾನೆ. ಇವೆಲ್ಲವೂ

ನಾವು ಓದುತ್ತಿರುವ ಪವಿತ್ರ ಖುರ್‌ಆನಿನ ವಚನದ ಬಲವಾದ ಶಕ್ತಿ ಮತ್ತು ವೈಶಿಷ್ಟ್ಯದ ಕಾರಣದಿಂದಾಗಿದೆ. ನಾನು ಪವಿತ್ರ ಖುರ್‌ಆನಿನಲ್ಲಿ ಒಂದು ಬಲವಾದ ಶಕ್ತಿಯನ್ನು ಕಂಡಿದ್ದೇನೆ. ಹಝ್ರತ್ ಪೈಗಂಬರ್[ಸ]ರ ಅನುಸರಣೆಯಲ್ಲಿ ನಾನು ಒಂದು ವಿಸ್ಮಯಕರವಾದ ವಿಶೇಷತೆಯನ್ನು ಕಂಡಿದ್ದೇನೆ. ಅದೇನೆಂದರೆ ಸತ್ಯಸಂಧನಾಗಿ ಅನುಸರಿಸುವವನು ದೇವನ ಸ್ನೇಹಿತನೆಂಬ ಪದವಿಯನ್ನು ಗಳಿಸುತ್ತಾನೆ.

ಪವಿತ್ರ ಖುರ್‌ಆನಿನ ಗುಣಗಳನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪವಿತ್ರ ಖುರ್‌ಆನಿಗೆ ನಾಲ್ಕು ವಿಶಿಷ್ಟ ಗುಣಗಳಿವೆ. ಮೊದಲನೆಯದ್ದು, ಪವಿತ್ರ ಖುರ್‌ಆನಿನ ಭಾಷಾ ಶ್ರೇಷ್ಠತೆಯಾಗಿದೆ. ಅದು ಮನುಷ್ಯನ ವಾಕ್ಚಾತುರ್ಯದಿಂದ ಸಂಪೂರ್ಣವಾಗಿ ಭಿನ್ನವಾದುದಾಗಿದೆ. ಎರಡನೆಯದ್ದು, ಪವಿತ್ರ ಖುರ್‌ಆನಿನಲ್ಲಿರುವ ಕಥೆಗಳೆಲ್ಲವೂ ಸತ್ಯದಲ್ಲಿ ಭವಿಷ್ಯವಾಣಿಗಳಾಗಿವೆ. ಮೂರನೆಯ ವಿಶಿಷ್ಟ ಗುಣವೇನೆಂದರೆ, ಪವಿತ್ರ ಖುರ್‌ಆನಿನ ಅಧ್ಯಾಪನೆಯು ಮನುಷ್ಯನ ಸ್ವಭಾವ ಪ್ರಕೃತವನ್ನು ಅದರ ಪರಿಪೂರ್ಣತೆಗೆ ತಲುಪಿಸಲು ಸಂಪೂರ್ಣವಾದ ಸಂಗತಿಗಳನ್ನು ಹೊಂದಿಕೊಂಡಿದೆ. ನಾಲ್ಕನೆಯ ಮುಖ್ಯವಾದ ವಿಶಿಷ್ಟ ಗುಣವೇನೆಂದರೆ, ಪರಿಪೂರ್ಣವಾಗಿ ಅನುಸರಿಸುವವರನ್ನು ಅದು ಅಲ್ಲಾಹನಿಗೆ ಎಷ್ಟು ಸಮೀಪಗೊಳಿಸುತ್ತದೆ ಎಂದರೆ, ಅನುಸರಿಸುವವನು ಅಲ್ಲಾಹನೊಡನೆ ಸಂಭಾಷಣೆ ನಡೆಸುವ ಸೌಭಾಗ್ಯವನ್ನು ಪಡೆಯುತ್ತಾನೆ ಮತ್ತು ಸ್ಪಷ್ಟವಾದ ದೃಷ್ಟಾಂತಗಳು ಆತನಿಂದ ಪ್ರಕಟವಾಗುತ್ತವೆ. ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ, ಅದನ್ನು ಅನುಸರಿಸುವುದರಿಂದ ಪ್ರಾರ್ಥನೆಗಳು ಸ್ವೀಕಾರಗೊಳ್ಳುತ್ತವೆ.

ಪವಿತ್ರ ಖುರ್‌ಆನಿನ ಅದ್ಭುತಕರವಾದ ಪ್ರಭಾವಗಳಲ್ಲಿ ಒಂದೇನೆಂದರೆ, ಅದನ್ನು ಪರಿಪೂರ್ಣವಾಗಿ ಅನುಸರಿಸುವವನು ಸ್ವೀಕೃತಿಯ ಪದವಿಯನ್ನು ಪಡೆಯುತ್ತಾನೆ ಮತ್ತು ಆತನ ದುಆಗಳು ಸ್ವೀಕಾರಗೊಂಡ ನಂತರ ಅಲ್ಲಾಹನು ತನ್ನ ಸವಿಯಾದ ಮಾತು ಮತ್ತು ಪ್ರತಾಪದ ಮೂಲಕ ದುಆ ಸ್ವೀಕಾರಗೊಂಡದ್ದರ ಬಗ್ಗೆ ತಿಳಿಸಿಯೂ ಕೊಡುತ್ತಾನೆ ಹಾಗೂ ವಿಶೇಷವಾಗಿ ವಿರೋಧಿಗಳಿಗೆ ಎದುರಾಗಿ ಅಂಥವರಿಗೆ ನೆರವು ಸಹ ನೀಡುತ್ತಾನೆ.

ಪವಿತ್ರ ಖುರ್‌ಆನಿನ ಪ್ರಭಾವಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಸಡ್ಡೆಯ ಮರೆಗಳನ್ನು ನುಚ್ಚುನೂರು ಮಾಡುವಂತಹ, ದೇಹದಲ್ಲಿ ಒಂದು ನಡುಕ ಉಂಟುಮಾಡುವಂತಹ, ಮರಣವನ್ನು ಸಮೀಪಗೊಳಿಸಿ ತೋರಿಸುವಂತಹ ಸುದೃಢವಾದ ವಿಶ್ವಾಸವು ದೇವನ ಶ್ರೇಷ್ಠತೆ ಮತ್ತು ಗಾಂಭೀರ್ಯದ ಕುರಿತು ಇರಬೇಕು. ಪಾಪದ ಕಡೆಗೆ ಪ್ರೇರಣೆ ನೀಡುವ ಆತ್ಮದ ಎಲ್ಲ ನರಗಳು ತುಂಡಾಗುವಂತಹ ದೇವಭಯ ಹೃದಯದಲ್ಲಿ ಇರಬೇಕು ಮತ್ತು ಮನುಷ್ಯನು ಅದೃಶ್ಯವಾದ ಒಂದು ಕೈಯಿಂದ ಅಲ್ಲಾಹನ ಕಡೆಗೆ ಸೆಳೆಯಲ್ಪಡುವಂತೆ ಆಗಬೇಕು. ನಿರ್ಭೀತ ಅಪರಾಧಿಯನ್ನು ಶಿಕ್ಷಿಸದೇ ಬಿಡದ ದೇವನೊಬ್ಬನು ನಿಜವಾಗಿಯೂ ಇದ್ದಾನೆ ಎಂಬ ದೃಢವಿಶ್ವಾಸ ಆತನ ಹೃದಯದಲ್ಲಿ ತುಂಬಿರಬೇಕು. ಈ ಆವಶ್ಯಕತೆಗಳನ್ನು ಪೂರೈಸುವ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ ಎಂದು ನಾನು ಪ್ರತಿಯೊಬ್ಬರಿಗೂ ತಿಳಿಸುತ್ತೇನೆ. ಪವಿತ್ರ ಖುರ್‌ಆನನ್ನು ಅನುಸರಿಸುವ ಮನುಷ್ಯನ ಮುಂದೆ ಅಲ್ಲಾಹನು ಸ್ವತಃ ಪ್ರಕಟಗೊಳ್ಳುತ್ತಾನೆ ಮತ್ತು ಅಲ್ಲಾಹನು ಸರ್ವಲೋಕವನ್ನು ಆತನಿಗೆ ತೋರಿಸಿ ಕೊಡುತ್ತಾನೆ ಹಾಗೂ ನಾನಿದ್ದೇನೆ ಎಂಬ ತನ್ನ ಸ್ವರದಿಂದ ತನ್ನ ಅಸ್ತಿತ್ವದ ಬಗ್ಗೆ ತಿಳಿಸಿಕೊಡುತ್ತಾನೆ.

ಪವಿತ್ರ ಖುರ್‌ಆನ್ ಶಿರ್ಕಿನಿಂದ ಮುಕ್ತಿ ಪಡೆಯಲು ಇರುವ ಮಾರ್ಗವಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅರಬ್ ದೇಶಗಳಲ್ಲಿ, ಇರಾನ್, ಈಜಿಪ್ಟ್, ಸಿರಿಯ, ಭಾರತ, ಚೀನಾ, ಅಫ್ಘಾನಿಸ್ತಾನ, ಕಾಶ್ಮೀರ ಮುಂತಾದ ದೇಶಗಳಲ್ಲಿ ಏಕದೇವ ವಿಶ್ವಾಸದ ಬೀಜವನ್ನು ಪವಿತ್ರ ಖುರ್‌ಆನ್ ಬಿತ್ತಿದ್ದು ಮತ್ತು ಹೆಚ್ಚಿನ ದೇಶಗಳಿಂದ ಬಹುದೇವಾರಾಧನೆ ಮತ್ತು ಸೃಷ್ಟಿ ಪೂಜೆಯ ಬೀಜವನ್ನು ಬೇರು ಸಹಿತ ಕಿತ್ತು ಹಾಕಿದ್ದು ಎಂತಹ ಕಾರ್ಯವಾಗಿದೆ ಎಂದರೆ, ಅದಕ್ಕೆ ಸಮಾನವಾದ ಕೆಲಸ ಯಾವುದೇ ಕಾಲದಲ್ಲಿ ಕಾಣಲು ಸಿಗುವುದಿಲ್ಲ.

ಪವಿತ್ರ ಖುರ್‌ಆನಿನ ಅಧ್ಯಾಪನೆ ಅತ್ಯುನ್ನತವಾದ ಅಧ್ಯಾಪನೆಯಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅತ್ಯಂತ ಕೀಳುಮಟ್ಟದ ಕೆಡುಕಿನ ಸಮಯದಲ್ಲಿ ಅವತೀರ್ಣವಾದ ಗ್ರಂಥದಲ್ಲಿ ಅತ್ಯಂತ ಉನ್ನತ ಅಧ್ಯಾಪನೆ ಇರಬೇಕಾದ ಆವಶ್ಯಕತೆಯಿತ್ತು. ತಪ್ಪಾದ ವಿಶ್ವಾಸಗಳು ಯಾರ ಹೃದಯಗಳಲ್ಲಿ ಆಳವಾಗಿ ಬೇರೂರಿತ್ತೋ ಮತ್ತು ಯಾರಿಗೆ ದುಷ್ಟ ಕೃತ್ಯಗಳನ್ನು ಮಾಡುವುದು ಕಡ್ಡಾಯವೆಂಬಂತೆ ಆಗಿತ್ತೋ ಅಂಥವರ ಸುಧಾರಣೆಗೆ ಆ ಗ್ರಂಥ ಅವತೀರ್ಣಗೊಂಡಿತು.

ಪವಿತ್ರ ಖುರ್‌ಆನ್ ಜಾಗತಿಕ (ಪೂರ್ತಿ ಲೋಕಕ್ಕೆ ಇರುವ) ಗ್ರಂಥವಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಮನುಷ್ಯನು ಲೋಕದಲ್ಲಿ ನೆಲೆಸುವ ವಿಷಯದಲ್ಲಿ ಪ್ರಗತಿಗೊಂಡನು. ಪರಸ್ಪರ ಭೇಟಿಯಾಗಲು ಮಾರ್ಗಗಳು ತೆರೆಯಲ್ಪಟ್ಟುವು. ಒಂದು ದೇಶದ ಜನರು ಮತ್ತೊಂದು ದೇಶದ ಜನರನ್ನು ಭೇಟಿಯಾಗುವಂತಾಗಲು ಏರ್ಪಾಡು ಉಂಟಾಯಿತು. ಭೂಮಿಯ ಇತರ ಭಾಗಗಳಲ್ಲೂ ಮನುಷ್ಯರು ಇದ್ದಾರೆ ಎಂದು ತಿಳಿದುಬಂತು. ಇಂತಹ ಸ್ಥಿತಿಯಲ್ಲಿ ಮನುಷ್ಯರನ್ನು ಒಂದು ಸಮುದಾಯವನ್ನಾಗಿ ಮಾಡಲು ಮತ್ತು ಭಿನ್ನತೆಯ ನಂತರ ಮನುಷ್ಯರನ್ನು ಒಂದುಗೂಡಿಸಲು ಅಲ್ಲಾಹನು ಇರಾದೆ ಮಾಡಿಕೊಂಡನು. ಆಗ ಅಲ್ಲಾಹನು ಸಕಲ ಜನರಿಗಾಗಿ ಒಂದು ಗ್ರಂಥವನ್ನು ಅವತೀರ್ಣಗೊಳಿಸಿದನು.

ಪವಿತ್ರ ಖುರ್‌ಆನಿನ ನಾಲ್ಕು ಘಟಕಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ತಿಳಿಸಿರುವರು. ಮೊದಲನೆಯದ್ದು **ಇಲ್ಲತೇ ಫಾಇಲಿ**. ಎಂದರೆ ಅದನ್ನು ನಿರ್ಮಿಸುವವನು ಯಾರು ಮತ್ತು ಅದರ ಕಾರಣಗಳೇನು ಎಂಬುವುದಾಗಿದೆ. ಎರಡನೆಯದ್ದು **ಇಲ್ಲತೇ ಸೂರಿ**. ಎಂದರೆ ಬಾಹ್ಯ ಮತ್ತು ಕೃತ್ಯರೂಪದ ಕಾರಣಗಳೇನು ಎಂಬುದಾಗಿದೆ. ಮೂರನೆಯದ್ದು **ಇಲ್ಲತೇ ಮಾದಿ**. ಎಂದರೆ ಅದರ ಭೌತಿಕವಾದ ಪ್ರಯೋಜನಗಳೇನು ಎಂಬುವುದಾಗಿದೆ. ನಾಲ್ಕನೆಯದ್ದು **ಇಲ್ಲತೇ ಗ಼ಾಯಿ**. ಎಂದರೆ ಇವೆಲ್ಲದರ ಮೂಲ ಕಾರಣ ಮತ್ತು ಉದ್ದೇಶವೇನು ಎಂಬುದಾಗಿದೆ. **ಇಲ್ಲತೇ ಫಾಇಲಿ** ಎಂಬುದಕ್ಕೆ ಸಂಬಂಧಿಸಿ ಅಲ್ಲಾಹನು **ಅಲಿಫ್ ಲಾಮ್ ಮೀಮ್** ಅಥವಾ **ಅನಲ್ಲಾಹು ಅಅ್‌ಲಮ್** ಎಂದು ಹೇಳಿರುವನು. ಎಂದರೆ ನಾನು ಎಲ್ಲವನ್ನು ಬಲ್ಲವನಾದ ಅಲ್ಲಾಹನಾಗಿರುವೆನು. **ಇಲ್ಲತೇ ಮಾದಿ** **"ಧ಼ಾಲಿಕಲ್ ಕಿತಾಬು"** ಆಗಿದೆ. ಎಂದರೆ ಈ ಗ್ರಂಥ ಎಲ್ಲರಿಗಿಂತ ಹೆಚ್ಚು ಜ್ಞಾನವುಳ್ಳ ಅಲ್ಲಾಹನ ಕಡೆಯಿಂದ ಅವತೀರ್ಣಗೊಂಡಿದೆ. ಇದರ ಪ್ರಕಾರ ನಡೆಯುವುದರಿಂದ ನೈಜವಾದ ಪ್ರಯೋಜನಗಳನ್ನು ಗಳಿಸಬಹುದಾಗಿದೆ. **ಇಲ್ಲತೇ ಸೂರಿ** **"ಲಾ ರೈಬ ಫೀಹಿ"** ಆಗಿದೆ. ಎಂದರೆ ಈ ಗ್ರಂಥದ ಗುಣವೈಶಿಷ್ಟ್ಯ ಮತ್ತು ಶ್ರೇಷ್ಠತೆ ಏನೆಂದರೆ,

ಇದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಅದರಲ್ಲಿರುವ ಸಂಗತಿಗಳು ಸುದೃಢವಾದುದಾಗಿವೆ ಮತ್ತು ಅದರಲ್ಲಿರುವ ವಾದಗಳು ಪುರಾವೆಯುಕ್ತ ಮತ್ತು ಸ್ಪಷ್ಟವಾದುವು ಆಗಿವೆ. ಈ ಗ್ರಂಥದ **ಇಲ್ಲತೇ ಗ್ಹಾಯಿ "**ಹುದಲ್ಲಿಲ್ ಮುತ್ತಖೀನ್**"** ಆಗಿದೆ. ಎಂದರೆ ಈ ಗ್ರಂಥದ ಉದ್ದೇಶ ದೇವಭಕ್ತರಿಗೆ ಸನ್ಮಾರ್ಗವನ್ನು ತೋರಿಸುವುದಾಗಿದೆ.

(ಹುಝೂರ್ ಹೇಳಿದರು:) ಇಂದಿನ ನಾಮಧಾರಿ ಮುಲ್ಲಗಳು ಪವಿತ್ರ ಖುರ್‌ಆನಿನ ಅನಂತವಾದ ಅಧ್ಯಾಪನೆಯನ್ನು ಯಾವ ರೀತಿಯಲ್ಲಿ ಮುಂದಿರಿಸಿದ್ದಾರೆ ಎಂದರೆ, ಅದರಿಂದ ಇಸ್ಲಾಮಿನ ವಿರೋಧಿಗಳಿಗೆ ಪವಿತ್ರ ಖುರ್‌ಆನಿನ ಮೇಲೆ ಆಕ್ಷೇಪವೆತ್ತಲು ಸಂದರ್ಭ ಲಭಿಸಿದೆ. ಇಂದು, ತಮ್ಮೊಳಗೆ ದೇವಭಕ್ತಿಯನ್ನು ಉಂಟುಮಾಡಿಕೊಂಡು ಅದರ ಅಧ್ಯಾಪನೆಯ ಶ್ರೇಷ್ಠತೆಗಳನ್ನು ತಮ್ಮ ಮಾತು ಮತ್ತು ಕೃತ್ಯದಿಂದ ಸಾಬೀತುಗೊಳಿಸಬೇಕಾದುದು ಅಹ್ಮದಿಯರ ಕೆಲಸವಾಗಿದೆ. ಪವಿತ್ರ ಖುರ್‌ಆನೇ ಎಲ್ಲ ರೋಗಗಳಿಗೆ ಚಿಕಿತ್ಸೆಯಾಗಿದೆ ಎಂದು ಲೋಕಕ್ಕೆ ಹೇಳಿಕೊಡಿರಿ. ದೇವಭಕ್ತಿಯಲ್ಲಿ ನಡೆಯುತ್ತಾ ಪವಿತ್ರ ಖುರ್‌ಆನಿನ ಪ್ರಕಾರ ನಡೆಯಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಬಾಂಗ್ಲಾದೇಶ, ಪಾಕಿಸ್ತಾನ, ಬುರ್ಕಿನಾಫಾಸೋ ಮತ್ತು ಅಲ್‌ಜೀರಿಯಾದ ಅಹ್ಮದಿಯರಿಗಾಗಿ ದುಆ ಮಾಡಲು ಪ್ರೇರೇಪಿಸಿದರು. ಹುಝೂರ್ ಹೇಳಿದರು:) ನಾನೀಗ ದುಆ ಮಾಡಲು ಕೂಡ ಹೇಳಲು ಬಯಸುತ್ತೇನೆ. ಬಾಂಗ್ಲಾದೇಶದಲ್ಲಿ ಈಗ ಜಲ್ಸ ಸಾಲಾನ ನಡೆಯುತ್ತಿದೆ. ಇಂದು ಅವರ ಮೊದಲ ದಿನವಾಗಿತ್ತು. ಆದರೆ ಅಲ್ಲಿ ಎದುರಾಳಿಗಳು ಜಲ್ಸ ಪ್ರದೇಶಕ್ಕೆ ಬಂದು ದಾಳಿ ನಡೆಸಿದರು. ಅನೇಕ ಜನರು ಗಾಯಾಳು ಕೂಡ ಆದರು. ಕೆಲವರು ತೀವ್ರವಾಗಿ ಗಾಯಾಳು ಕೂಡ ಆಗುವ ರೀತಿಯಲ್ಲಿ ಹಲ್ಲೆ ನಡೆಸಿರುವರು ಎಂದು ಇಲ್ಲಿಯ ವರೆಗೆ ಲಭಿಸಿರುವ ವಾರ್ತೆಯಿಂದ ತಿಳಿದು ಬಂದಿದೆ. ಅದಲ್ಲದೇ ಆ ಪ್ರದೇಶದ ಅಹ್ಮದಿಯರ ಮನೆಗಳನ್ನು ಸುಡುತ್ತಿದ್ದಾರೆ. ಎಷ್ಟು ನಷ್ಟ ಉಂಟಾಗಿದೆ ಎಂಬುದರ ಅಂದಾಜು ಈಗಿಲ್ಲ. ಅಲ್ಲಾಹನು ಅಹ್ಮದಿಯರನ್ನು ಅವರ ಉಪದ್ರವದಿಂದ ಸಂರಕ್ಷಿಸಲಿ ಮತ್ತು ಅವರನ್ನು ಹಿಡಿಗೂಡಲಿ. ಅವರಿಗಾಗಿ ಸನ್ಮಾರ್ಗದ ದುಆವನ್ನು ಮಾಡುವಂತಿಲ್ಲ. **ಅಲ್ಲಾಹುಮ್ಮ ಮಝ್ಝಿಖ್‌ಹುಮ್ ಕುಲ್ಲ ಮುಮಝ್ಝಖಿನ್ ವಸಹ್ಹಿಖ್‌ಹುಮ್ ತಸ್‌ಹೀಖಾ** ಎಂಬ ದುಆವೇ ನಾಲಗೆಯಿಂದ ಮತ್ತು ಹೃದಯದಿಂದ ಹೊರಡುತ್ತಿದೆ.

ಅದೇ ರೀತಿಯಲ್ಲಿ ಪಾಕಿಸ್ತಾನದ ಅವಸ್ಥೆಗಾಗಿಯೂ ದುಆ ಮಾಡಿರಿ. ಅಲ್ಲೂ ಅಲ್ಲಾಹನು ಅಹ್ಮದಿಯರ ಸ್ಥಿತಿಗತಿಗಳನ್ನು ಸರಿಯಾಗಿ ಇರಿಸಲಿ. ಬುರ್ಕಿನಾಫಾಸೋದಲ್ಲೂ ಈಗ ಅಪಾಯಗಳು ತಲೆದೋರುತ್ತಿವೆ. ಅಲ್ಲಿಗಾಗಿಯೂ ದುಆ ಮಾಡಿರಿ. ಅದೇ ರೀತಿಯಲ್ಲಿ ಅಲ್‌ಜೀರಿಯಾದಲ್ಲೂ ಅಹ್ಮದಿಯರ ಮೇಲೆ ಕೆಲವು ಮೊಕದ್ದಮೆಗಳು ಇವೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲಡೆ ಅಹ್ಮದಿಯರನ್ನು ಸಂರಕ್ಷಿಸಲಿ.

'ಚಿಂತಿಸಬೇಡಿರಿ, ನೀವು ಜಲ್ಸ ನಡೆಸಿರಿ ಮತ್ತು ನಾವು ಸಂಪೂರ್ಣ ಸಂರಕ್ಷಣೆ ನೀಡುವೆವು' ಎಂದು ಬಾಂಗ್ಲಾದೇಶದಲ್ಲಿ ಅಲ್ಲಿನ ಸರ್ಕಾರ ನಮ್ಮೊಡನೆ ಹೇಳಿತ್ತು. ಆದರೆ ಭಯೋತ್ಪಾದಕ ಉಗ್ರವಾದಿ ಮುಲ್ಲಾಗಳು ತಮ್ಮ ತಂಡದೊಂದಿಗೆ ಬಂದಾಗ ಅಲ್ಲಿ ನಿಂತಿದ್ದ ಪೊಲೀಸರು ತಮಾಷೆ ನೋಡುವ ರೀತಿಯಲ್ಲಿ ಕುಳಿತುಕೊಂಡಿದ್ದರು. ಅವರು ಏನೂ ಮಾಡುತ್ತಿರಲಿಲ್ಲ. ಹೇಗಿದ್ದರೂ ನಾವು ಅಲ್ಲಾಹನ ಮುಂದೆ ಬಾಗಬೇಕು, ಅಲ್ಲಾಹನೊಡನೆ ದುಆ ಮಾಡಬೇಕು. ನಮ್ಮ ಆ ಸಹೋದರರ ಕಷ್ಟತೆಗಳನ್ನು ಅಲ್ಲಾಹನು ಬೇಗನೇ ದೂರ ಸರಿಸಲಿ. ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At, '**Masjid Mubarak'**, Islamabad, Tilford, UK, on 03-03-2023*
**Summarized by** *Majlis Ansarullah Bharat*
***Kannada Translation**:* M. Ubeidullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon